ಇ) ಹಾಗಿದ್ದಲ್ಲಿ ಈ ಅಧಿಕಾರಿಗಳ ವಿರುದ್ಧ ಸರ್ಕಾರದವರು ಈವರೆಗೆ ಕ್ರಮ ಕೈಗೊಂಡಿದ್ದಾರೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಲ್ಲ. ಜಿಲ್ಲಾ ಪಂಚಾಯತ್ ತುಮಕೂರು ಇಲ್ಲಿನ ಉಪಕಾರ್ಯದರ್ಶಿಯವರು ಪೂರ್ವಬಾವಿ ತನಿಖೆ ನಡೆಸಿರುತ್ತಾರೆ ಇಂತಹ ಘಟನೆಗಳು ನಡೆದ ಬಗ್ಗೆ ವರದಿಯಲ್ಲಿ ಸಾಬೀತಾಗಿರುವುದಿಲ್ಲ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಸುರತ್ಕಲ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ.

936 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ನಗರ ಪ್ರದೇಶಕ್ಕೆ ಸರ್ಕಾರಿ ಆಸ್ಪತ್ರೆಗೆ ವ್ಯವಸ್ಥಿತ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಇದೆಯೇ? ಇಲ್ಲವಾದಲ್ಲಿ ಆ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು?

ಆ) ಸದರಿ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಹಾಸಿಗೆಗಳ ವ್ಯವಸ್ಥೆ ಇದೆಯೇ? ಇಲ್ಲವಾದಲ್ಲಿ ಕಾರಣಗಳೇನು? ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಆಕುಕ 54 ಎಸ್‌ಎಂಎ 96

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸದರಿ ಆಸ್ಪತ್ರೆಗೆ ನಗರ ಪಂಚಾಯತ್ ಮತಿಯಿಂದ ನಲ್ಲಿ ನೀರನ್ನು ಒದಗಿಸಲಾಗುತ್ತಿದೆ.

ಆ) ಪ್ರಸ್ತುತ ಸುರತ್ಕಲ್‌ನಲ್ಲಿ 10 ಹಾಸಿಗೆಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ.

ರಾಜ್ಯದಲ್ಲಿ ಏಡ್ಸ್ ಖಾಯಿಲೆ ಪ್ರಕರಣಗಳು.

2601-ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಡ್ಸ್ ಖಾಯಿಲೆಯ ಪ್ರಕರಣಗಳು ಎಷ್ಟು? 1992-93 ರಿಂದ 1995-96ನೇ ಸಾಲಿನಲ್ಲಿ ಪರಿಶೀಲಿಸಿದ ಪ್ರಕರಣಗಳು ಮತ್ತು ಖಚಿತ ಪಟ್ಟಿದ್ದು ಹಾಗೂ ಸಾವಿನ ಸಂಖ್ಯೆ ಎಷ್ಟು?

ಆ) ಯಾವ ಕಾರಣದಲ್ಲಿ ಹೆಚ್ಚು ಪ್ರಕರಣಗಳು ಕಂಡು ಬರಿದಿದೆ?

ಇ) ರೋಗವನ್ನು ಪೂರ್ಣ ನಿಯಂತ್ರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ 1996ರ ಜೂನ್ ತಿಂಗಳ ಅಂತ್ಯದವರೆವಿಗೆ 50 ಏಡ್ಸ್ ರೋಗ ಪ್ರಕರಣಗಳು ಹಾಗೂ 2377 ಜನರಿಗೆ ಏಡ್ಸ್ ಸೋಂಕು ತಗುಲಿರುವ ಪ್ರಕರಣಗಳು